# ಆಹಾ ಸುದ್ದಿ!

★ ಸಸಿತೋಟ




ಕ್ಯಾಲಿಫೋರ್ನಿಯಾದಲ್ಲಿ ರಸ್ತೆ ವಿಭಜಕ್ಕೆ ಡಿಕ್ಕಿ ಹೊಡೆದ ಕಾರು ಗಾಳಿಯಲ್ಲಿ ಡೈವ್ ಹೊಡೆದ ಕಟ್ಟಡವೊಂದರ ಎರಡನೇ ಅಂತಸ್ತಿನಲ್ಲಿರುವ ದಂತ ವೈದ್ಯನ ಕಚೇರಿಗೆ ನುಗ್ಗಿತಂತೆ. ಚಾಲಕನಿಗೆ ಹಲ್ಲು ನೋವು ಅಷ್ಟೊಂದು ತೀವ್ರವಾಗಿ ಬಾಧಿಸಬಾರದಿತ್ತು!



ಇಟಲಿಯ ಹಿಮ ಶಿಖರದ ಕೊರೆಯುವ ಚಳಿಯಲ್ಲೂ ಸೌನಾ (ಆವಿ) ಸ್ನಾನ ಮಾಡುವ ಸೌಲಭ್ಯವಿದೆಯಂತೆ. ಪರ್ವತಾರೋಹಿಗಳ ಆಸೆಗೆ ತಣ್ಣನೆಯ ಹಿಮ ಎರಚುವುದು ಯಾಕೆ ಎಂದು ಅಲ್ಲಿಯೂ ಈ ಮಿನಿ ಸ್ನಾನಗೃಹ ಸ್ಥಾಪಿಸಿಕೊಂಡು ಕಾಸು ಮಾಡಲಾಗುತ್ತಿದೆಯಂತೆ.

ಆನ್‌ಲೈನ್‌ನಲ್ಲಿ ತಿನಿಸು ಬುಕ್ ಮಾಡುವವರು ಕೆಲವರಾದರೂ ಸಮಯಕ್ಕೆ ಸರಿಯಾಗಿ ತಲುಪದಿರುವ ಬಗ್ಗೆ, 'ನಿಮ್ಮ ಪ್ರದೇಶಕ್ಕೆ ನಮ್ಮ ಸೇವೆ ಇಲ್ಲ' ಎಂಬ ಸಂದೇಶ ಬಂದ ಬಗ್ಗೆ ಸಿಡಿಮಿಡಿಗೊಂಡಿರಬಹುದು. ಆದರೆ ಫ್ರಾನ್ಸ್‌ನಲ್ಲಿ ನೆಲೆಸಿದ ವಿಮಾನ ಚಾಲಕ ಜೇಮ್ಸ್ ಎಂಬಾತನಿಗೆ ಬ್ರಿಟನ್ನಿನ ಭಾರತೀಯ ಉಪಾಹಾರ ಗೃಹ ಆಕಾಶ್ ಕೋಳಿ ಸಾರು, ಮಾವಿನಕಾಯಿ ಚಟ್ನಿ, ಹಪ್ಪಳ ಸೇರಿದಂತೆ ಅಪ್ಪಟ ಭಾರತೀಯ ಊಟವನ್ನು ಬಾಡಿಗೆ ವಿಮಾನದಲ್ಲಿ ಕಳಿಸಿತಂತೆ. 12 ಪೌಂಡ್‌ಗಿಂತ ಜಾಸ್ತಿ ಮೌಲ್ಯದ ಆಹಾರದ ಬೇಡಿಕೆ ಸಲ್ಲಿಸಿದವರಿಗೆ ಬಡವಾಡೆ ಉಚಿತ ಎಂದು ಪ್ರಚಾರ ಮಾಡಿಕೊಂಡಿದ್ದೇ ಇದಕ್ಕೆ ಕಾರಣವಂತೆ. ಈಗ ವಿಮಾನದ ಖರ್ಚು ಹಾಗೂ ಜಾಹೀರಾತಿನ ಖರ್ಚು ಎಂದು ಲೆಕ್ಕ ಹಾಕುತ್ತ ಮಾಲೀಕರು ತಲೆ ಕೆಡಿಸಿಕೊಂಡು ಕೂತಿರಬಹುದು.

ಗಣ್ಯರು ತಮ್ಮ ಭದ್ರತೆಗೆ ಸಿಬ್ಬಂದಿ ನೇಮಿಸಿಕೊಂಡರೆ ಅಮೆರಿಕದ ರೂಪದರ್ಶಿ, ಸೆಲೆಬ್ರಿಟಿ ಪ್ಯಾರಿಸ್ ಹಿಲ್ಟನ್ ತನ್ನ ನಿಶ್ಚಿತಾರ್ಥದ ಉಂಗುರದ ಮೇಲೆ ನಿಗಾ ಇಡಲು ಭದ್ರತಾ ಸಿಬ್ಬಂದಿಯನ್ನು ನೇಮಿಸಿಕೊಂಡಿದ್ದಾಳಂತೆ. ಇತ್ತೀಚೆಗಷ್ಟೇ ನಿಶ್ಚಿತಾರ್ಥ ಮಾಡಿಕೊಂಡಿರುವ ಹಿಲ್ಟನ್‌ಗೆ ಆಕೆಯ ಪ್ರಿಯಕರ ತೊಡಿಸಿದ್ದು ಬರೋಬ್ಬರಿ 13 ಕೋಟಿ ರೂಪಾಯಿ ಮೌಲ್ಯದ ವಜ್ರದುಂಗುರ. ಆಕೆ ಹೋದಲ್ಲೆಲ್ಲ ಸಿಬ್ಬಂದಿ ಹಿಂಬಾಲಿಸಿ ಆಕೆಯ ಬೆರಳಿನ ನಿಗಾ ಇಟ್ಟರೆ, ಭಾವಿ ಪತಿಯ ಮೇಲೆ ನಿಗಾ ಇಡುವವರ್ಯಾರೋ!

ಅಮೆರಿಕದ ಪ್ರಸಿದ್ಧ ಅನಿಮೇಟೆಡ್ ಚಲನಚಿತ್ರ ಫ್ಲಿಂಟ್‌ಸ್ಟೋನ್ಸ್. ಇದನ್ನು ಶಿಲಾಯುಗದ ಕಥೆಯ ಹಿನ್ನೆಲೆಯಲ್ಲಿ ಚಿತ್ರಿಸಲಾಗಿದ್ದು ಇದರಲ್ಲಿ ಬರುವ ಕಾರಿನ ಪ್ರತಿಕೃತಿಯನ್ನು ಮಲೇಷ್ಯಾದ ಸುಲ್ತಾನರಿಗೆ ಉಡುಗೊರೆ ನೀಡಲಾಗಿದೆಯಂತೆ. ಚಲನಚಿತ್ರದಲ್ಲಿ ಕಾರನ್ನು ಚಾಲಕರು ತಳ್ಳುತ್ತ ಸಾಗುತ್ತಾರೆ. ಸುಲ್ತಾನರಿಗೂ ಈ ಖಯಾಲಿ ಅಂಟಿಕೊಂಡರೆ ಪೆಟ್ರೋಲಿಗಿಂತ ದುಬಾರಿಯಾದೀತು.



ಝೆಕ್ ಗಣರಾಜ್ಯದಲ್ಲಿ ನಡೆದ ಅಂತರರಾಷ್ಟ್ರೀಯ ಬೆಪ್ಪು ನಡಿಗೆಯ ದಿನದಂದು ಕಂಡ ನೋಟ. ತಮಗೂ ಒಂದು ದಿನವಿದೆ ಎಂದು ಬೆಪ್ಪರು ಬೆನ್ನು ತಟ್ಟಿಕೊಳ್ಳಬಹುದು.

